ಕರಾವಳಿ ಜಿಲ್ಲೆಗಳ ಜಾನಪದ ಕಲೆಗಳ ಕುರಿತು ಸಂಶೋಧನಾ ಲೇಖನಗಳನ್ನು ಬರೆದಿರುವ ಗಾಯತ್ರಿ ನಾವಡ ತುಳುವಿನ ಸಿರಿ ಮಹಾಕಾವ್ಯದ ಬಗ್ಗೆ ಅಧಿಕೃತವಾಗಿ ಮಾತನಾಡಬಲ್ಲವರು. 'ಭಾರತೀಯ ಸ್ತ್ರೀವಾದ ಒಂದು ಸಂಕಥನ', 'ಮಹಿಳಾ ಸಂಕಥನ', 'ಸಿರಿಕತೆ', 'ಕರಾವಳಿ ಜಾನಪದ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು' ಸೇರಿದಂತೆ ಹಲವು ಕೃತಿಗಳನ್ನು ಬರೆದಿದ್ದಾರೆ. ಉಡುಪಿಯ ಕೋಟೇಶ್ವರ ಅವರ ಹುಟ್ಟೂರು. ಮಂಗಳೂರು ನಿವಾಸಿ.

ಪದ್ಯ ಪ್ರಕಾರಗಳಲ್ಲಿ ದೊರೆಯುತ್ತದೆ. ಊರೆಲ್ಲ ಮರುಭೂಮಿಯಾಗಿದೆ. ತಾಯಿಯೊಬ್ಬಳು ತೋಟದಲ್ಲಿ ಹೊಸೆಕೆರಿ ಹೊಸಬಾಮಿ ತೋಡಿಸುತ್ತಾಳೆ. ಹನಿನೀರು ಹರಿಯಲಿಲ್ಲ.

ಹರ್ಳ್ ಬೆಚ್ಚಿ ಕಾಂಬಂಗೆ
ನರ್ ಆವ್ತಿ ಬೇಕಂಬ್ರ್
ಜಲುವಾರೆ ನಿಮ್ಗೆ ಬೇಕಾರೆ
ಯಾರನ್ನಾರೂ ಕೊಡಿ ಸೆಟ್ಟಿ

ಎನ್ನುವಲ್ಲಿ ನಿರ್ದಿಷ್ಟವಾಗಿ ಸೊಸೆಹೆಣ್ಣನ್ನು ಹಾರಕೊಡಲು ಹೇಳಿಲ್ಲ ಎನ್ನುವಲ್ಲಿನ ಸೂಕ್ಷ್ಮವನ್ನು ಗ್ರಹಿಸಬೇಕು. ಸೊಸೆಹೆಣ್ಣನ್ನು ಹಾರಕೊಡುವ ನಿರ್ಧಾರವಾಗುವುದು ತಾಯಿಮಕ್ಕಳ ಮಾತುಕತೆಯಲ್ಲಿ. ತನ್ನನ್ನು ಹಾರಕೊಡುವ ಸುದ್ದಿ ತಿಳಿದಾಗ ಸೊಸೆಹೆಣ್ಣು ತವರಿಗೆ ಹೋಗಿ ಬರಲು ಬಯಸುತ್ತಾಳೆ. ಸೊಸೆಹೆಣ್ಣನ್ನು ಹಾರಕೊಡುವಲ್ಲಿ ಗಂಡನ ಕುಟುಂಬಕ್ಕಿದ್ದ ಆತುರ, ಕಾತುರ ಕರ್ನಾಟಕದ ಇತರ ಪಠ್ಯಗಳಲ್ಲಿ ಕಂಡರೂ ಕರಾವಳಿ ಪಠ್ಯದಲ್ಲಿ ಅವರ ಆತಂಕ, ಆತುರ ಅವರೊಡ್ಡುವ ತೀವ್ರ ಷರತ್ತಿನಲ್ಲಿ ಇನ್ನಷ್ಟು ಸಶಕ್ತವಾಗಿ ಪ್ರಕಟವಾಗಿದೆ. ಹೀಗೆ ಆತಂಕ ಮತ್ತು ದಿಗಿಲು ಯಾಕೆಂದರೆ ಕರಾವಳಿಯಲ್ಲಿ ಮಾತೃರೂಪಿ ಸಂಸ್ಕೃತಿಯ ಹೆಣ್ಣಿಗೆ ತವರು ತನ್ನದೇ ಮನೆ, ತನ್ನದೇ ಹಕ್ಕು, ಅಧಿಕಾರದ ಸ್ಥಾನ. ಹೀಗಾಗಿ ತವರಿಗೆ ಹೋದ ಸೊಸೆಹೆಣ್ಣು ಅಲ್ಲಿಯೇ ಉಳಿದರೆ, ಮರಳಿ ಬಾರದಿದ್ದರೆ ಎನ್ನುವ ವಾಸ್ತವ ಅವರ ಹೆಚ್ಚಿನ ಒತ್ತಡಕ್ಕೆ ಕಾರಣವಾಗಿರುವುದು. ಹಾಗಾಗಿ,

ಯಾಕೆಣ್ಣೆ ಹೋಪೂದು
ಗೆದ್ದಿ ಬಯ್ಲಿನ ಕಸ್ಟು
ಹಟ್ಟಿ ಕೊಟ್ಟಿಗಿ ಕಸ್ಟು
ಮನಿ ಎಲ್ಲ ಹೊದ್ದು ಹಯ್ದಿದೆ

